**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೋಲಾರ**

**Spl. C(Courrption) 9/2014**

**ಪ್ರಾಸಾ ಃ 3 ಚಾಸಾ ಃ 6**

**ದಿನಾಂಕಃ 09-03-2021**

ಹೆಸರು ಃ- ವಿ ಮೋಹನ್ ಬಾಬು

ತಂದೆಯ ಹೆಸರು ಃ- ಡಿ. ವೆಂಕಟಪ್ಪ

ವಯಸ್ಸು ಃ- 38 ವರ್ಷ

ಉದ್ಯೋಗ ಃ- ಡೆಪ್ಯೂಟಿ ತಹಸೀಲ್ದಾರ್, ಚಿಂತಾಮಣಿ ತಾಲ್ಲೂಕು ಕಛೇರಿ

ವಾಸಸ್ಥಳ ಃ- ಕ್ಯಾಸಂಬಳ್ಳಿ ಕೆಜಿಎಫ್,

**(ಪ್ರಮಾಣವಚನ ಮಾಡಿಸಲಾಗಿದೆ)**

**ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

ನಾನು 03-06-2007 ರಿಂದ 2013 ರವರೆಗೆ ಪ್ರಥಮ ದರ್ಜೆ ಸಹಾಯಕನಾಗಿ ಎಸಿ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ಲೋಕಾಯುಕ್ತ ಪೊಲೀಸರು ನಮ್ಮ ಕಛೇರಿಗೆ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಸಾಕ್ಷಿದಾರರನ್ನಾಗಿ ಬರುವಂತೆ ಮನವಿ ಕೊಟ್ಟಿದ್ದರು. ಆ ದಿನ ಎಸಿರವರು ನನ್ನನ್ನು ಸಾಕ್ಷಿದಾರನನ್ನಾಗಿ ಹೋಗುವಂತೆ ಕಳುಹಿಸಿಕೊಟ್ಟಿದ್ದಾರೆ. ಅದರಂತೆ ನಾನು ಲೋಕಾಯುಕ್ತ ಕಛೇರಿಗೆ 22-11-2012 ರಂದು ಸಂಜೆ 05-00 ಘಂಟೆಗೆ ಹೋಗಿರುತ್ತೇನೆ. ಪುನಃ ನನಗೆ ಮರು ದಿನ ಬೆಳಗ್ಗೆ 05-00 ಘಂಟೆಗೆ ಕಛೇರಿಗೆ ಬರುವಂತೆ ಹೇಳಿ ಕಳುಹಿಸಿದ್ದರು. ನಂತರ ನಾನು ಲೋಕಾಯುಕ್ತ ಪೊಲೀಸರ ಜೊತೆಯಲ್ಲಿ ಕೋಲಾರದ ಕುರುಬರಪೇಟೆಗೆ ಹೋಗಿರುತ್ತೇನೆ. ಆ ದಿನ ನಾಗವೇಣಿ ಎನ್ನುವವರು ಕೂಡ ನಮ್ಮ ಜೊತೆ ಬಂದಿದ್ದರು. ನಾವು ವೆಂಕಟೇಶ್ ಎನ್ನುವವರ ಮನೆಗೆ ಹೋಗಿರುತ್ತೇವೆ. ಸಮಾಜ ಕಲ್ಯಾಣ ಇಲಾಖೆ ಮತ್ತು ಖಜಾನೆ ಇಲಾಖೆಯವರಿಗೆ ಸಂಬಂಧಿಸಿದಂತೆ ಯಾವುದೋ ಒಂದು ಪ್ರಕರಣದಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ತಿಳಿದುಬಂತು. ಲೋಕಾಯುಕ್ತ ಪೊಲೀಸರು ವೆಂಕಟೇಶ್ ಎನ್ನುವವರ ಮನೆಯ ಶೋಧನೆಗಾಗಿ ವಾರೆಂಟ್ ಇರುವುದಾಗಿ ತಿಳಿಸಿ ಸರ್ಚ್ ವಾರೆಂಟ್ ತೋರಿಸಿರುತ್ತಾರೆ. ಅದಕ್ಕೆ ನಾನು ರುಜು ಮಾಡಿರುತ್ತೇನೆ. ಸರ್ಚ್ ವಾರೆಂಟ್ ನಿಪಿ-21 ಎಂದು, ಸಾಕ್ಷಿ ರುಜುವನ್ನು ನಿಪಿ-21(ಎ)

ಎಂದು ಗುರುತಿಸಿದೆ. ಮನೆಯನ್ನು ಶೋಧನೆ ಮಾಡಿ ಮನೆಯಲ್ಲಿದ್ದ ಕೆಲವು ದಾಖಲೆಗಳನ್ನು ವಶಪಡಿಸಿಕೊಂಡಿರುತ್ತಾರೆ. ಬ್ಯಾಂಕ್ ದಾಖಲೆಗಳನ್ನು ತೆಗೆದುಕೊಂಡಿದ್ದಾರೆ. ಒಟ್ಟು 20 ದಾಖಲೆಗಳನ್ನು ಆ ದಿನ ವಶಪಡಿಸಿಕೊಂಡಿರುತ್ತಾರೆ. ಸದರಿ ದಾಖಲೆಗಳಿಗೆ ನಾನು ಕೂಡ ರುಜು ಮಾಡಿರುತ್ತೇನೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ವೆಂಕಟೇಶ್ ರವರ ಮನೆಯಲ್ಲಿ ವಶಪಡಿಸಿಕೊಂಡ ದಾಖಲೆಗಳು ದೋಷಾರೋಪಣ ಪಟ್ಟಿ ವಾಲ್ಯುಂ-12 ರ ಡಿ-32 ಎಂದು ಹಾಜರು ಪಡಿಸಲಾಗಿದ್ದು ಈ ಎಲ್ಲಾ ದಾಖಲೆಗಳನ್ನು ಸಾಕ್ಷಿ ಗುರುತಿಸಿ, ಇದೇ ದಾಖಲೆಗಳನ್ನು ಆ ದಿನ ವಶಪಡಿಸಿಕೊಂಡಿರುವುದಾಗಿ ತಿಳಿಸಿರುತ್ತಾರೆ. ಈ ದಾಖಲೆಗಳನ್ನು ನಿಪಿ-22 ರಿಂದ ನಿಪಿ-41 ಎಂದು ಗುರುತಿಸಿವೆ. ನಿಪಿ-22 ರಲ್ಲಿ ಸಾಕ್ಷಿ ರುಜು ಗುರುತಿಸಿದ್ದು ನಿಪಿ-22(ಎ) ಎಂದು ಗುರುತಿಸಿದೆ. ಅದೇ ರೀತಿ ಎಲ್ಲಾ ದಾಖಲೆಗಳಿಗೂ ತಾನು ರುಜು ಮಾಡಿರುವುದಾಗಿ ಸಾಕ್ಷಿ ತಿಳಿಸಿದ್ದಾರೆ. ದಾಖಲೆ ವಶಪಡಿಸಿಕೊಂಡ ಬಗ್ಗೆ ಮಹಜರ್ ಬರೆದುಕೊಂಡಿದ್ದಾರೆ, ಮಹಜರ್ ನಿಪಿ-42 ಎಂದು, ಸಾಕ್ಷಿ ರುಜು ನಿಪಿ-42(ಎ) ಎಂದು ಗುರುತಿಸಿದೆ. ಮಹಜರ್-ಗೆ ಆ ದಿನ ನನ್ನ ಜೊತೆ ನಾಗವೇಣಿ ಎನ್ನುವವರು ಕೂಡ ರುಜು ಮಾಡಿದ್ದಾರೆ. ಉಳಿದ ವಸ್ತುಗಳನ್ನು ಆರೋಪಿ ವೆಂಕಟೇಶ್‌ರವರಿಗೆ ಹಿಂತಿರುಗಿಸಿ ಅವುಗಳ ಬಗ್ಗೆ ಒಂದು ಬಾಂಡ್ ಬರೆಸಿಕೊಂಡಿರುತ್ತಾರೆ. ಸದರಿ ಬಾಂಡ್ ನಿಪಿ-43 ಎಂದು ಗುರುತಿಸಿದೆ. ಇದಕ್ಕೆ ಆರೋಪಿ ರುಜು ಮಾಡಿದ್ದಾರೆ, ಆರೋಪಿಯ ರುಜುವನ್ನು ನಿಪಿ-43(ಎ) ಎಂದು, ಸಾಕ್ಷಿ ರುಜುವನ್ನು ನಿಪಿ-43(ಬಿ) ಎಂದು ಗುರುತಿಸಿದೆ. ಮಹಜರನ್ನು ಬೆಳಗ್ಗೆ 06-00 ರಿಂದ ಮದ್ಯಾಹ್ಣ 02-00 ಘಂಟೆರವರೆಗೆ ಮಾಡಿರುತ್ತಾರೆ. ನಂತರ 5 ನೇ ಆರೋಪಿ ವೆಂಕಟೇಶ್ ರವರನ್ನು ಲೋಕಾಯುಕ್ತ ಕಛೇರಿಗೆ ಕರೆಸಿಕೊಂಡಿರುತ್ತಾರೆ. ನಂತರ ಆರೋಪಿ ಕಡೆಯಿಂದ ಆಂಗ್ಲ ಮತ್ತು ಕನ್ನಡ ಭಾಷೆಯಲ್ಲಿ ಮಾದರಿ ಬರವಣಿಗೆಗಳನ್ನು ಪಡೆದುಕೊಂಡಿರುತ್ತಾರೆ. ನಂತರ ಒಂದು ಮಹಜರ್ ಬರೆದಿರುತ್ತಾರೆ, ಮಹಜರ್ ನಿಪಿ-44 ಎಂದು, ಸಾಕ್ಷಿ ರುಜುವನ್ನು ನಿಪಿ-44(ಎ) ಎಂದು ಗುರುತಿಸಿದೆ. ಆರೋಪಿ ಬರೆದುಕೊಟ್ಟ ಮಾದರಿ ಬರವಣಿಗೆಗೆ ನಾನು ಕೂಡ ರುಜು ಮಾಡಿರುತ್ತೇನೆ. ಮಾದರಿ ಬರವಣಿಗೆಯಲ್ಲಿ ಸಾಕ್ಷಿ ತನ್ನ ರುಜು ಗುರುತಿಸಿರುತ್ತಾರೆ,

ಆಂಗ್ಲ ಮಾದರಿ ಬರವಣಿಗೆ ನಿಪಿ-45 ಎಂದು ಸಾಕ್ಷಿ ರುಜು ನಿಪಿ-45(ಎ) ಎಂದು, ಕನ್ನಡ ಮಾದರಿ ಬರವಣಿಗೆ ನಿಪಿ-46 ಎಂದು, ಸಾಕ್ಷಿ ರುಜು ನಿಪಿ-46(ಎ) ಎಂದು ಗುರುತಿಸಿದೆ. ಈ ಮಾದರಿ ಬರವಣಿಗೆಯನ್ನು ಆರೋಪಿ ವೆಂಕಟೇಶ್ ಬರೆದಿರುತ್ತಾರೆ ಎಂದು ಸಾಕ್ಷಿ ತಿಳಿಸಿರುತ್ತಾರೆ. ಅಂಕೆಗಳ ಮಾದರಿಯನ್ನು ಕೂಡ ಆರೋಪಿಯಿಂದ ಬರೆಸಿಕೊಂಡಿದ್ದು ಅಂಕೆಗಳ ಮಾದರಿ ನಿಪಿ-47 ಎಂದು, ಸಾಕ್ಷಿ ರುಜು ನಿಪಿ-47(ಎ) ಎಂದು ಗುರುತಿಸಿದೆ. ಆರೋಪಿ ಕಡೆಯಿಂದ ಮತ್ತೆ ಬೇರೆ ಏನನ್ನೂ ಬರೆಸಿಕೊಂಡಿಲ್ಲ.

24-11-2012 ರಂದು ಸಮಾಜ ಕಲ್ಯಾಣ ಇಲಾಖೆಗೆ ಬೆಳಗ್ಗೆ 11-00 ಘಂಟೆಗೆ ಲೋಕಾಯುಕ್ತ ಪೊಲೀಸರು, ಸಿಬ್ಬಂದಿ, ನಾನು ಮತ್ತು ನಾಗವೇಣಿ ಎಲ್ಲರೂ ಹೋಗಿರುತ್ತೇವೆ. ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದ ನರಸಿಂಹಪ್ಪ ಮತ್ತು ನಾಗರತ್ನಮ್ಮ ಎನ್ನುವ ನೌಕರರ ಮೇಲೆ ಆಪಾದನೆ ಇರುವುದಾಗಿ ತಿಳಿಸಿದರು. ಸದರಿ ಇಲಾಖೆಯಿಂದ ಒಂದು ಹಾಸ್ಟೆಲ್ ಮತ್ತು ಜಿಲ್ಲಾ ಖಜಾನೆಗೆ ಸಂಬಂಧಿಸಿದಂತೆ 20 ದಾಖಲೆಗಳನ್ನು ಲೋಕಾಯುಕ್ತ ಪೊಲೀಸರು ವಶಪಡಿಸಿಕೊಂಡಿರುತ್ತಾರೆ. ಈ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. ಈ ಬಗ್ಗೆ ಒಂದು ಮಹಜರ್ ಬರೆದಿರುತ್ತಾರೆ, ಮಹಜರನ್ನು ನಿಪಿ-48 ಎಂದು, ಸಾಕ್ಷಿ ರುಜುವನ್ನು ನಿಪಿ-48(ಎ) ಎಂದು ಗುರುತಿಸಿದೆ. ಮಹಜರಿಗೆ ಸಾಕ್ಷಿ ನಾಗವೇಣಿ ಕೂಡ ರುಜು ಮಾಡಿರುತ್ತಾರೆ.

(ಈ ದಾಖಲೆಗಳು ದೋಷಾರೋಪಣ ಪಟ್ಟಿ ವಾಲ್ಯುಂ 2(1) ರಲ್ಲಿದ್ದು ಆರೋಪಿ ಪರ ವಕೀಲರು ಇವುಗಳ ಪ್ರತಿಗಳನ್ನು ದೋಷಾರೋಪಣ ಪಟ್ಟಿಯ ಜೊತೆಗೆ ಕೊಟ್ಟಿಲ್ಲ ಎನ್ನುವುದಾಗಿ, ಅವುಗಳನ್ನು ಗುರುತಿಸುವ ಬಗ್ಗೆ ತಕರಾರು ಸೂಚಿಸಿರುತ್ತಾರೆ. ಈ ದಾಖಲೆಗಳ ನಕಲನ್ನು ಆರೋಪಿ ಪರ ವಕೀಲರಿಗೆ ಕೊಡಲು ಲೋಕಾಯುಕ್ತ ಪೊಲೀಸರಿಗೆ ನಿರ್ದೇಶನ ನೀಡಿ ಮುಂದುವರೆದ ಮುಖ್ಯ ವಿಚಾರಣೆ ಮುಂದೂಡಲಾಗಿದೆ)

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು**)**

ಓ ಹೇ ಕೇ ಸ ಇ

ಸಹಿ/-

(ಎಂ.ಎಲ್.ರಘುನಾಥ)

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೋಲಾರ.**